सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಸಂಖ್ಯೆ:ರಾಚುಆ: 11 :ಟಿಜೆಡ್‌ಪಿ:2016

ನಂ.8, 1ನೇ ಮಹಡಿ, ಕರ್ನಾಟಕ ರಾಜ್ಯ ಸಹಕಾರ
ಮಾರಾಟ ಮಂಡಳಿ ಕಟ್ಟಡ (ಹಿಂಭಾಗ),
ಕನ್ನಿಂಗ್‌ಹ್ಯಾಮ್ ರಸ್ತೆ,
ಬೆಂಗಳೂರು, ದಿನಾಂಕ: 13-02-2016

## -: ಪತ್ರಿಕಾ ಪ್ರಕಟಣೆ :-

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಸಾರ್ವತ್ರಿಕ ಚುನಾವಣೆಗಳು, 2016 ರ ಸಂಬಂಧ ಮೊದಲನೇ ಹಂತದದಲ್ಲಿ 15 ಜಿಲ್ಲೆಗಳಲ್ಲಿ ಮತದಾನ ನಡೆದಿದ್ದು, ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿ ಶಾಂತಿಯುತವಾಗಿ ಮುಕ್ತಾಯವಾಗಿರುತ್ತದೆ. ವಿದ್ಯುನ್ಮಾನ ಮತಯಂತ್ರಗಳನ್ನು ಮತ್ತು ಶಾಸನಬದ್ಧ ಪ್ರಪತ್ರಗಳನ್ನು ಭದ್ರತಾ ಕೊಠಡಿಯಲ್ಲಿರಿಸುವ ಕಾರ್ಯವು ನಡೆಯುತ್ತಿದ್ದು, ಈ ಪ್ರಕ್ರಿಯೆ ತಡರಾತ್ರಿಯವರೆಗೆ ಮುಂದುವರೆಯಲಿದೆ.

ಪ್ರಾಥಮಿಕ ವರದಿಯಂತೆ ಶೇಕಡ 71 ರಿಂದ 73 ರಷ್ಟು ಮತದಾನವಾಗಿದೆಯೆಂದು ಅಂದಾಜಿಸಲಾಗಿದೆ. ಜಿಲ್ಲೆಗಳ ಎಲ್ಲಾ ಕ್ಷೇತ್ರಗಳಿಂದ ವಿವರಗಳು ಲಭ್ಯವಾದ ನಂತರ ವಾಸ್ತವ ಶೇಕಡಾವಾರು ಮತದಾನದ ಪ್ರಮಾಣವು ತಿಳಿಯಲಿದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ಪಂಚಾಯತಿಯ 2-ಹಲಗೇರಿ ಕ್ಷೇತ್ರದ ಮತಗಟ್ಟೆ ಸಂಖ್ಯೆ 66 ಮಾವಿನಗುಂಡಿ (ಪೂರ್ವ) ಮತಗಟ್ಟೆಯ ವಿದ್ಯುನ್ಮಾನ ಮತಯಂತ್ರದಲ್ಲಿ ಅಳವಡಿಸಿದ್ದ ಮತಪತ್ರವು ಬದಲಾವಣೆಯಾಗಿದ್ದ ಕಾರಣ ಈ ಮತಗಟ್ಟೆಯಲ್ಲಿ ದಿನಾಂಕ: 15-02-2016 ರಂದು ಮರು ಮತದಾನ ನಡೆಯಲಿದೆ. ಮರು ಮತದಾನದಲ್ಲಿ ಮತದಾರರಿಗೆ ಬಲಗೈನ ತೋರು ಬೆರಳಿಗೆ ಅಳಿಸಲಾಗದ ಶಾಯಿ ಹಚ್ಚಲಾಗುವುದು.

(ಆರ್.ಚಂದ್ರಶೇಖರ್)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ.

D:\MJ\Press Note.docx